# ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡಾವಳಿಗಳು

ವಿಷಯ: ಕಾಲೇಜು ಶಿಕ್ಷಣ ಇಲಾಖೆ ದಿನಗೂಲಿ ನೌಕರರ ವೇತನ ಇನ್ನಿತರೆ ಸೌಲಭ್ಯಕ್ಕಾಗಿ ಅನುದಾನ ಬಿಡುಗಡೆ ಕುರಿತು.

ಉಲ್ಲೇಖ: 1.ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ/77/ಶಾಸನ/2012, ದಿ:15.02.2013
2.ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/33/ಯುಇಸಿ/2014, ದಿ:14.11.2014
3.ಸರ್ಕಾರದ ಪತ್ರ ಸಂಖ್ಯೆ:ಇಡಿ/41/ಹೆಚ್‌ಪಿಸಿ/2017, ದಿನಾಂಕ:13.04.2017
06/04/2017, ಮತ್ತು 06/07/2017 ಮತ್ತು ದಿನಾಂಕ:28-09-2017
4.ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳ ಪ್ರಸ್ತಾವನೆ

--*--

**ಪ್ರಸ್ತಾವನೆ:**

ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಾಂಕ:10.04.2006ರಂದು 10 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ದಿನಗೂಲಿ ನೌಕರರನ್ನು ಅವರು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರಿಸಿ ಉಲ್ಲೇಖ-1 ಮತ್ತು (2)ರ ಸರ್ಕಾರದ ಅಧಿಸೂಚನೆಗಳಲ್ಲಿ ಆದೇಶಿಸಲಾಗಿದೆ. 2017-18ನೇ ಸಾಲಿನಲ್ಲಿ ಉಲ್ಲೇಖ-3ರ ಸರ್ಕಾರದ ಪತ್ರದಲ್ಲಿ ಆಯವ್ಯಯ ಲೆಕ್ಕಶೀರ್ಷಿಕೆ:2202-03-103-2-01-034ರಡಿ ಲಭ್ಯವಿರುವ ಅನುದಾನದಿಂದ ಮೊದಲನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡಿರುವ ಅನುದಾನದಿಂದ ಪಾವತಿಸಲು ಅನುಮತಿ ನೀಡಲಾಗಿರುತ್ತದೆ. ಅದರಂತೆ ಉಲ್ಲೇಖ(4) ರಲ್ಲಿ ಸ್ವೀಕೃತವಾಗಿರುವ ಪ್ರಸ್ತಾವನೆಯನ್ನು ಆಧಾರಿಸಿ ದಿನಗೂಲಿ ಆಧಾರದ ಮೇಲೆ ಮುಂದುವರೆದು ಕಾರ್ಯನಿರ್ವಹಿಸುತ್ತಿರುವ ನೌಕರರುಗಳಿಗೆ ಲೆಕ್ಕಶೀರ್ಷಿಕೆ:2202-03-103-2-01-034 ರಡಿಯಲ್ಲಿ 2017-18ನೇ ಸಾಲಿನ ವೇತನವನ್ನು ಪಾವತಿಸಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ:21:ದಿನಗೂಲಿ ನೌ.ವೇ:ಆಯವ್ಯಯ:2017-18, ಬೆಂಗಳೂರು, ದಿನಾಂಕ:10.11.2017**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸೇವೆಯನ್ನು ಉಲ್ಲೇಖ-1 ಮತ್ತು (2)ರ ಸರ್ಕಾರದ ಅಧಿಸೂಚನೆಯಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಲಗತ್ತಿಸಿರುವ ದಿನಗೂಲಿ ನೌಕರರುಗಳಿಗೆ 2017-18ನೇ ಸಾಲಿನ ವೇತನ, ಮತ್ತಿತರೆ ಭತ್ಯೆಗಳನ್ನು ಆಯವ್ಯಯ ಲೆಕ್ಕಶೀರ್ಷಿಕೆ:2202-03-103-2-01-034ರಡಿಯಲ್ಲಿ ನಿಯಮಾನುಸಾರ ಪರಿಶೀಲಿಸಿ, ಅರ್ಹ ದಿನಗೂಲಿ ನೌಕರರಿಗೆ **ಒಟ್ಟು ರೂ.16,28,500/- (ರೂ ಹದಿನಾರು ಲಕ್ಷ ಇಪತ್ತೆಂಟು ಸಾವಿರದ ಐದು ನೂರು ಮಾತ್ರ/-)** ಗಳನ್ನು ಪಾವತಿಸುವ ಸಂಬಂಧ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದ ಪ್ರಕಾರ ಕಾಲೇಜಿನ ಪ್ರಾಂಶುಪಾಲರುಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

**(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.)**

**ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)**

**ಅನುದಾನ ಬಳಕೆಗೆ ಷರತ್ತುಗಳು:**

1. ಬಿಡುಗಡೆಗೊಳಿಸಿರುವ ಅನುದಾನವನ್ನು ನಿಯಮಾನುಸಾರ ಮೂಲವೇತನದೊಂದಿಗೆ, ಶೇ.75% ರಷ್ಟು ತುಟ್ಟಿಭತ್ಯೆ ಹಾಗೂ ಮನೆಬಾಡಿಗೆ ಭತ್ಯೆ ಮಾತ್ರ ಪಾವತಿಸುವುದು.
2. ಬಿಡುಗಡೆಗೊಳಿಸಿರುವ ಅನುದಾನವನ್ನು, ಬಿಡುಗಡೆಗೊಳಿಸಿರುವ ಉದ್ದೇಶಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳನ್ನು ಪರಿಶೀಲಿಸಿ ಅದರನ್ವಯವೇ ಬಳಸತಕ್ಕದ್ದು.
3. ಸದರಿ ಅನುದಾನವನ್ನು ಕೆ-2 ತಂತ್ರಾಂಶದಲ್ಲಿ ಕ್ಲೇಮ್ ಮಾಡತಕ್ಕದ್ದು.
4. ಅನುದಾನ ಬಳಕೆಯಾದ ನಂತರ ಕಡ್ಡಾಯವಾಗಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು ಹಾಗೂ ಸದರಿ ಮಾಹಿತಿಯನ್ನು ಆನ್‌ಲೈನ್ ಎಂಪಿಕ್ ನಲ್ಲಿ ಅಳವಡಿಸುವುದು.

**ಇವರಿಗೆ,**

1. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಅಂತರ್ಜಾಲದಲ್ಲಿ ಅಳವಡಿಸಲು ಕೋರಿದೆ.
3. ಕಛೇರಿ ಪ್ರತಿ.

ಆದೇಶ ಸಂಖ್ಯೆ:ಕಾಶಿಇ:21:ದಿನಗೂಲಿ ನೌ.ವೇ:ಆಯವ್ಯಯ:2017-18, ಬೆಂಗಳೂರು, ದಿನಾಂಕ:10.11.2017

ಅನುಬಂಧ

| ಕ್ರ. ಸಂ | ಕಾಲೇಜಿನ ಹೆಸರು | ದಿನಗೂಲಿ ನೌಕರರ ಹೆಸರು ಶ್ರೀ/ಶ್ರೀಮತಿ | ಬಿಡುಗಡೆ ಮಾಡಲಾದ ಅನುದಾನ | ಷರಾ |
|---|---|---|---|---|
| 1 | 2 | 3 | 4 | 5 |
| 1 | ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು | ಶಿವಲಿಂಗಯ್ಯ.ಎಂ | ರೂ.1,20,000/- | ಆಗಸ್ಟ್ -2017 ರಿಂದ ಮಾರ್ಚ್-2018 ರವರೆಗಿನ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ |
| 2 | ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು | ಮೂರ್ತಿ.ವಿ.ಎಲ್, ಪರಿಚಾರಕರು | ರೂ.90,000/- | ಅಕ್ಟೋಬರ್-2017 ರಿಂದ ಮಾರ್ಚ್-2018 ರವರೆಗಿನ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ |
| 3 | ಸರ್ಕಾರಿ ಆರ್.ಸಿ. ಕಾಲೇಜು, ಬೆಂಗಳೂರು | ನಾಗರಾಜ.ಎಂ, ಸಹಾಯಕ | ರೂ.90,000/- | ಅಕ್ಟೋಬರ್-2017 ರಿಂದ ಮಾರ್ಚ್-2018 ರವರೆಗಿನ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ |
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೊರಬ | ನಾಗರಾಜ.ಎಂ, | ರೂ.14,500/- | ಸೆಪ್ಟೆಂಬರ್-2017 ನೇ ಮಾಹೆಯ ವೇತನ ಪಾವತಿಗಾಗಿ |
| 5 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ | ಗಂಗಮ್ಮ, | ರೂ.83,000/- | ಅಕ್ಟೋಬರ್-2017 ರಿಂದ ಮಾರ್ಚ್-2018 ರವರೆಗಿನ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ |
| 6 | ಸರ್ಕಾರಿ ಕಲಾ ಕಾಲೇಜು, ಬೆಂಗಳೂರು | ಶಿವರಾಮಯ್ಯ,<br>ಸಿದ್ದರಾಮಯ್ಯ.ಟಿ,<br>ನಾಗರಾಜ.ಡಿ, | ರೂ.2,75,000/- | ಅಕ್ಟೋಬರ್-2017 ರಿಂದ ಮಾರ್ಚ್-2018 ರವರೆಗಿನ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ |
| 7 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ | ಬೆಟ್ಟಯ್ಯ.ಹೆಚ್, ಪರಿಚಾರಕರು<br>ರಂಗನಾಥಪ್ಪ, ಪರಿಚಾರಕರು | ರೂ 1,65,000/- | ಅಕ್ಟೋಬರ್-2017 ರಿಂದ ಮಾರ್ಚ್-2018 ರವರೆಗಿನ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ |
| 8 | ಸರ್ಕಾರಿ ಮಹಿಳಾ ಕಾಲೇಜು ಮಂಡ್ಯ | ಗಾಯಿತ್ರಿ ಎಂ.ಎಸ್ | ರೂ.83,000/- | ಅಕ್ಟೋಬರ್-2017 ರಿಂದ ಮಾರ್ಚ್-2018 ರವರೆಗಿನ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ |
| 9 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ | ಜಯನರಸಿಂಹ ಮೂರ್ತಿ | ರೂ.83,000/- | ಅಕ್ಟೋಬರ್-2017 ರಿಂದ ಮಾರ್ಚ್-2018 ರವರೆಗಿನ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ |
| 10 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ | ಓಬಳೇಶಪ್ಪ | ರೂ.1,50,000/- | ಮೇ-2017 ರಿಂದ ಮಾರ್ಚ್-2018 ರವರೆಗಿನ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ |

| | | | | |
|---|---|---|---|---|
| 11 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ | ಶಿವಾನಂದ.ಸಿ | ರೂ.1,25,000/- | ಜುಲೈ-2017 ರಿಂದ ಮಾರ್ಚ್-2018 ರವರೆಗಿನ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ |
| 12 | ಸರ್ಕಾರಿ ಕಾಲೇಜು ಕಲಬುರಗಿ | ಶಂಕರ ಅಡಿವೆಪ್ಪ<br>ಗಂಗಮ್ಮ ಭೀಮಶಾ<br>ಪರಗಪ್ಪ ರುಕ್ಕಪ್ಪ | ರೂ 3,50,000 | ಆಗಸ್ಟ್-2017 ರಿಂದ ಮಾರ್ಚ್-2018 ರವರೆಗಿನ ವೇತನ ಹಾಗೂ ತುಟ್ಟಿಭತ್ಯೆ ಬಾಕಿ ಪಾವತಿಗಾಗಿ |
| | | ಒಟ್ಟು ರೂ = | ರೂ.16,28,500/-<br>(ರೂ .ಹದಿನಾರು ಲಕ್ಷದ ಇಪ್ಪತ್ತೆಂಟು ಸಾವಿರದ ಐದು ನೂರು ಗಳು ಮಾತ್ರ/-) | |

(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.)

ಕಾಲೇಜು ಶಿಕ್ಷಣ ನಿರ್ದೇಶಕರು (ಪ್ರ)